ಹಾಗೂ ನನಗೆ ಇರುವ ಚೌಕಟ್ಟಿನೊಳಗೆ ತಾಜಾ ಪದಗಳನ್ನು ಬಳಸಿ ಹಾಡು ಬರೆಯುವೆ. ಹಾಡುಗಳಲ್ಲಿ ಕ್ಲಿಷ್ಟಕರ ಪದ ಬಳಸಿದರೆ ಕೇಳುಗರಿಗೆ ಅದು ಕಷ್ಟವಾಗುತ್ತದೆ. ಒಂದು ವೇಳೆ ನಾವು ಕ್ಲಿಷ್ಟಕರವಾದ ಪದ ಬಳಸಿದರೂ ಅದು ಅವರ ಹೃದಯಕ್ಕೆ ನಾಟುವುದಿಲ್ಲ. ನಿತ್ಯ ಅವರು ಬಳಸುವ ಪದಗಳಲ್ಲಿಯೇ ಹಾಡು ಬರೆದರೆ ಪದೇ ಪದೇ ಅದನ್ನು ಕೇಳುತ್ತಾರೆ.

**4** ಸಿನಿಮಾ ಎಂದರೇನೆ ಡೆಡ್‌ಲೈನಿನೊಳಗೆ ಕೆಲಸ ಮಾಡುವಂತಹದ್ದು. ನಿರ್ದೇಶಕರ ಕಡೆಯಿಂದ ಸಹಜವಾಗಿ ಒತ್ತಡ ಇರುತ್ತದೆ. ಸೃಜನಾತ್ಮಕ ಕ್ಷೇತ್ರದಲ್ಲಿ ಅಥವಾ ಕೆಲಸದ ವಿಚಾರದಲ್ಲಿ ತುಂಬಾ ಒತ್ತಡ ವರ್ಕೌಟ್ ಆಗಲ್ಲ. ಸಂಗೀತಕ್ಕೆ ಸಾಹಿತ್ಯದ ನ್ಯಾಯ ಸಿಗಬೇಕು. ಡೆಡ್‌ಲೈನ್ ಇಟ್ಟುಕೊಂಡು ಕೆಲಸ ಮಾಡಬೇಕು ನಿಜ. ಆದರೆ, ಕೆಲವೊಮ್ಮೆ ಅದು ಏರುಪೇರಾಗುತ್ತದೆ. ಕೆಲವೊಮ್ಮೆ ಡೆಡ್‌ಲೈನ್ ಮೀರಬಾರದು ಎಂಬ ಕಾರಣಕ್ಕೆ ಹಾಡಿನ ಒಂದು ಡ್ರಾಫ್ಟ್ ಅನ್ನು ನಿರ್ದೇಶಕರಿಗೆ ಕೊಟ್ಟು, ‘ಇಲ್ಲ ಇದು ಯಾಕೋ ನನಗೆ ಸರಿ ಬರುತ್ತಿಲ್ಲ. ಸೋ ಇನ್ನೊಂದನ್ನು ಕೊಡುತ್ತೇನೆ’ ಎಂದು ಹೇಳಿದ್ದುಂಟು.

**5** ನನ್ನ ಹಾಡು ನನ್ನೊಳಗಿನ ಕೇಳುಗನಿಗೆ ತೃಪ್ತಿ ಕೊಡಬೇಕು. ಆನಂತರ ಬೇರೆಯವರಿಗೆ ಅಂತ ನಂಬಿದ್ದೇನೆ. ಎಲ್ಲೊರಳಗೂ ಒಬ್ಬೊಬ್ಬ ಸಂಗೀತ ಆಸಕ್ತನಿರುತ್ತಾನೆ. ಅವನಿಗೆ ಹಾಡು ತೃಪ್ತಿ ಕೊಡಬೇಕು. ಹಾಡಿಗೆ ಸಂಬಂಧಿಸಿದಂತೆ ಸಾರ್ಥಕ ಎನಿಸಿದ ಘಟನೆಗಳು ತುಂಬಾ ಇವೆ. ಕೇಳುಗರು ನನ್ನ ಹಾಡುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದಾಗ ಸಾರ್ಥಕ ಭಾವ ಮೂಡುತ್ತದೆ.

**6** ಕನ್ನಡದಲ್ಲಿ ಅಂತಹ ಹಾಡುಗಳು ತುಂಬಾ ಇವೆ. ಒಂದು ಎರಡು ಅಂತ ಕೌಂಟ್ ಮಾಡಲು ಆಗದು. ರಾಜ್‌ಕುಮಾರ್ ಅವರು ಹಾಡಿದ ‘ನಾದಮಯ ಈ ಲೋಕವೆಲ್ಲ’ ಹಾಡು ಇಷ್ಟ. ಎಸ್‌ಪಿಬಿ ಹಾಗೂ ಹಂಸಲೇಖ ಅವರ ಕಾಂಬಿನೇಷನ್‌ನಲ್ಲಿ ಮೂಡಿಬಂದ ಪಂಚಾಕ್ಷರಿ ಗವಾಯಿ ಸಿನಿಮಾದ ಎಲ್ಲ ಹಾಡುಗಳು ಇಷ್ಟ.

**7** ಜಯಂತ ಕಾಯ್ಕಿಣಿ, ನಾಗೇಂದ್ರ ಪ್ರಸಾದ್, ಕವಿರಾಜ್, ಹೃದಯಶಿವ ಸೇರಿದಂತೆ ಎಲ್ಲರೂ ಮುಖ್ಯ ಅನಿಸುತ್ತಾರೆ. ಪ್ರತಿಯೊಬ್ಬರೂ ಅವರದ್ದೇ ಧಾಟಿಯಲ್ಲಿ ಕೇಳುಗರನ್ನು ಮೆಚ್ಚಿಸಿ ಅಭಿಮಾನ ಸಂಪಾದಿಸಿದ್ದಾರೆ. ಹೊಸದಾಗಿ ಹಾಡು ಬರೆಯುವವರು ಕನ್ನಡ ಸಿನಿಮಾ ಉದ್ಯಮಕ್ಕೆ ಮುಖ್ಯ.

**8** ಬಹುತೇಕ ಹಾಡುಗಳು ಖುಷಿಕೊಟ್ಟಿವೆ. ‘ಕಥೆಯೊಂದು ಶುರುವಾಗಿದೆ’ ಸಿನಿಮಾದ ಕಂಪ್ಲೀಟ್ ಆಲ್ಬಂಗೆ ನನ್ನದೇ ಸಾಹಿತ್ಯ. ಅದರಲ್ಲಿ ಒಂದೆರಡು ಹಾಡುಗಳ ಸಾಹಿತ್ಯ ಇನ್ನೂ ಸರಳವಾಗಿ ಮಾಡಬಹುದಿತ್ತು ಅನಿಸಿದ್ದಿದೆ. ‘ಟಗರು’ ಸಿನಿಮಾದ ‘ಮೇ ಮೆಂಟಲ್ ಹೋ ಜಾವ’ ಹಾಡನ್ನು ಇನ್ನೂ ಬೇರೆ ರೀತಿ ಮಾಡಬಹುದಿತ್ತು ಅನಿಸಿದ್ದಿದೆ.